**ಸಾಕ್ಷಿಯನ್ನು ದಿಃ 23.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

| | |
|---|---|
| **ನಿ.ಪಿ-13** | ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟು |
| **ನಿ.ಪಿ-14** | ಒಟ್ಟು 3 ಎಕ್ಸ್ ರೇ ಫಿಲಂಗಳು |
| **ನಿ.ಪಿ-15** | ಹೊರರೋಗಿ ದಾಖಲೆ |

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

15 ವರ್ಷಗಳಿಂದ ಕೆ.ಆರ್. ಆಸ್ಪತ್ರೆಯಲ್ಲಿ ಕೀಲು ಮತ್ತು ಮೂಳೆ ತಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬರುವ ಮೊದಲು ಬೇರೆ ಕಡೆ ಚಿಕಿತ್ಸೆ ಪಡೆದು ಬಂದ ಬಗ್ಗೆ ಮಾಹಿತಿ ಇಲ್ಲ. ಚಿಕಿತ್ಸೆ ಪಡೆದ ಆಸ್ಪತ್ರೆಯಲ್ಲಿ ಗಾಯದ ಪ್ರಮಾಣ ಪತ್ರ ನೀಡಬೇಕು ಎಂದರೆ ಸರಿ. ಟಿ.ನರಸೀಪುರದಲ್ಲಿ ಗಾಯದ ಪ್ರಮಾಣ ಪತ್ರ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಬಿಡುಗಡೆಯಾದ ನಂತರವೂ ಸಹ ಹೊರರೋಗಿಯಾಗಿ ಬಂದಿದ್ದಾರೆ. ಕೊನೆಯದಾಗಿ ದಿನಾಂಕ 24.04.2026 ಕ್ಕೆ ಬಂದಿದ್ದಾರೆ. ಗಾಯಗಳು ಭಾಗಶಃ ಗುಣಮುಖವಾಗಿದ್ದವು. 2-3 ವರ್ಷ ಸಂಪೂರ್ಣ ಗುಣಮುಖನಾಗಲು ಬೇಕಾಗುತ್ತದೆ. ಆ ಮೇಲೆ ಎಂದಿನಂತೆ ಕೆಲಸ ಕಾರ್ಯ ಮಾಡಬಹುದು ಎಂದರೆ ಹೇಳಲಾಗುವುದಿಲ್ಲ, ಪರೀಕ್ಷಿಸಿ

ಹೇಳಬೇಕು ಎನ್ನುತ್ತಾರೆ. ಅರ್ಜಿದಾರರಿಗೆ ಪರಿಹಾರಕ್ಕಾಗಿ ಶೇ.29 ಅಂಗ ನ್ಯೂನತೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ಮೈಸೂರು.**